# ಕರ್ತನ ಭೋಜನವನ್ನು ಪಡೆದುಕೊಳ್ಳಿರಿ

‘ಕರ್ತನರಾತ್ರಿ ಭೋಜನ’ದ ಬಗ್ಗೆ ಯೇಸುವಿನ ಆಜ್ಞೆಯನ್ನು ಕಲಿಸಲು ಈ ಕೆಳಗಿನವು ಒಂದು ರೂಪುರೇಖೆಯಾಗಿದೆ.

## ಭಾಗ ಒಂದು
## ಹಿಂತಿರುಗಿ ನೋಡುವುದು

### ಪ್ರಾರ್ಥನೆ

ಒಟ್ಟಿಗೆ ಪ್ರಾರ್ಥನೆಯೊಂದಿಗೆ ಆರಂಭಿಸಿರಿ.

# ಹೊಣೆಗಾರಿಕೆ

ಮಾಡಿದ ಬದ್ಧತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ.
ಉದಾಹರಣೆಗೆ, ಹೀಗೆ ಕೇಳಿರಿ:

- ನೀವು ಕೊನೆಯ ಬಾರಿಗೆ ಸುವಾರ್ತೆ ಅಥವಾ ಕಥೆಯನ್ನು ಯಾರೊಂದಿಗೂ ಹಂಚಿಕೊಂಡಿದ್ದೀರಾ?
- ನೀವು ಪ್ರತಿದಿನ ಸತ್ಯವೇದವನ್ನು ಓದಿದ್ದೀರಾ ಅಥವಾ ಕೇಳಿದ್ದೀರಾ?
- ದೇವರು ನಿಮಗೆ ಕಲಿಸಿದ್ದನ್ನು ನೀವು ಹೇಗೆ ಪಾಲಿಸಿದ್ದೀರಿ?
- ನೀವು ಇತರರನ್ನು ಪ್ರೀತಿಸಲು ಉದ್ದೇಶಪೂರ್ವಕವಾಗಿ ಹೆಜ್ಜೆಗಳನ್ನು ತೆಗೆದುಕೊಂಡಿದ್ದೀರಾ?
- ನೀವು ಹಂಚಿಕೊಳ್ಳಲು ಬಯಸುವ ಯಾವುದೇ ಪ್ರಾರ್ಥನೆ ವಿನಂತಿಗಳು ಅಥವಾ ಕಥೆಗಳು ಇದೆಯೇ?

# ಭಾಗ ಎರಡು
# ಮೇಲಕ್ಕೆ ನೋಡುವುದು

## ಅಧ್ಯಯನ

ಒಟ್ಟಿಗೆ ಸತ್ಯವೇದದ ಅಧ್ಯಯನ ಮಾಡುವುದರ ಮೂಲಕ 'ಕರ್ತನರಾತ್ರಿ ಭೋಜನ'ದ ವಿಷಯವಾಗಿ ಮಾಡುವ ಯೇಸುವಿನ ಆಜ್ಞೆಯ ಬಗ್ಗೆ ಕಲಿಸಿ. ಯೇಸು ಆಜ್ಞೆಯನ್ನು ನೀಡಿದ ಸಮಯವನ್ನು ಮೊದಲು ಓದಿ ಮತ್ತು ನಿಜವಾದ ಕಥೆಯನ್ನು ಚರ್ಚಿಸಿ ಅದು ವಿಧೇಯತೆ ಹೇಗಿರಬಹುದು ಎಂಬುದನ್ನು ವಿವರಿಸುತ್ತದೆ.

ಮತ್ತಾಯ 26:26–29:

> ಅವರು ಊಟಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಶಿಷ್ಯರಿಗೆ

ಕೊಟ್ಟು – ತಕ್ಕೊಳ್ಳಿರಿ, ತನ್ನಿರಿ, ಇದು ನನ್ನ ದೇಹ ಅಂದನು. ಆಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು – ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವುದೇ ಇಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು.

ಯೇಸು ತಾನು ಶಿಲುಬೆಗೆ ಹಾಕಲ್ಪಡುವ ಸ್ವಲ್ಪ ಸಮಯದ ಮುಂಚೆ, ತನ್ನ ಶಿಷ್ಯರೊಂದಿಗೆ ಪಸ್ಕಹಬ್ಬದ ಊಟವನ್ನು ಹಂಚಿಕೊಳ್ಳುತ್ತಾನೆ. ಊಟದ ಸಮಯದಲ್ಲಿ ಯೇಸು, ರೊಟ್ಟಿಯನ್ನು ತನ್ನ ದೇಹ, ಇದನ್ನು ತಿನ್ನಿರಿ, ಎಂದು ಹೇಳಿದನು. ನಂತರ ಆತನು ದ್ರಾಕ್ಷಾರಸವನ್ನು, ಇದು ಒಡಂಬಡಿಕೆಯ ನನ್ನ ರಕ್ತ ಇದನ್ನು ಪಾನಮಾಡಿರಿ ಅಂದನು.

ಲೂಕ 22:7–20:

ಹುಳಿ ಇಲ್ಲದ ರೊಟ್ಟಿಯನ್ನು ತಿನ್ನುವ ದಿವಸಗಳಲ್ಲಿ ಪಸ್ಕದ ಕುರಿಮರಿಯನ್ನು ಕೊಯ್ಯತಕ್ಕ ದಿವಸ ಬಂದಾಗ ಯೇಸು ಪೇತ್ರನಿಗೂ ಯೋಹಾನನಿಗೂ – ನೀವು ಹೋಗಿ ನಾವು

ಪಸ್ಕದ ಊಟಮಾಡುವಂತೆ ಸಿದ್ಧ ಮಾಡಿರಿ ಎಂದು ಹೇಳಿ ಅವರನ್ನು ಕಳುಹಿಸಿದನು. ಅವರು – ನಾವು ಎಲ್ಲಿ ಸಿದ್ಧಮಾಡಬೇಕೆನ್ನುತ್ತೀ? ಎಂದು ಆತನನ್ನು ಕೇಳಲು ಆತನು ಅವರಿಗೆ – ನೋಡಿರಿ, ನೀವು ಪಟ್ಟಣದೊಳಕ್ಕೆ ಹೋದ ಮೇಲೆ ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತುಕೊಂಡು ನಿಮ್ಮೆದುರಿಗೆ ಬರುವನು. ಅವನು ಹೋಗುವ ಮನೆಗೆ ನೀವು ಅವನ ಹಿಂದೆ ಹೋಗಿ, ಆ ಮನೆಯ ಯಜಮಾನನಿಗೆ – ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ ಊಟವನ್ನು ಮಾಡುವುದಕ್ಕೆ ಭೋಜನಾಶಾಲೆ ಎಲ್ಲಿ? ಎಂದು ನಿನ್ನನ್ನು ಕೇಳುತ್ತಾನೆ ಎಂಬದಾಗಿ ಹೇಳಿರಿ. ಅವನು ತಕ್ಕ ಸಾಮಾನಿಟ್ಟಿರುವ ಮೇಲಂತಸ್ತಿನ ದೊಡ್ಡಕೊಠಡಿಯನ್ನು ನಿಮಗೆ ತೋರಿಸುವನು; ಅಲ್ಲಿ ಸಿದ್ಧಮಾಡಿರಿ ಎಂದು ಹೇಳಿ ಕಳುಹಿಸಿದನು. ಅವರು ಹೊರಟು ಆತನು ತಮಗೆ ಹೇಳಿದಂತೆ ಕಂಡು ಪಸ್ಕಕ್ಕೆ ಸೌರಿಸಿದರು. ಗಳಿಗೆ ಬಂದಾಗ ಆತನು ತನ್ನ ಹನ್ನೆರಡು ಮಂದಿ ಅಪೋಸ್ತಲರ ಸಂಗಡ ಊಟಕ್ಕೆ ಕೂತುಕೊಂಡನು. ಆಗ ಆತನು ಅವರಿಗೆ – ನಾನು ಶ್ರಮೆ ಅನುಭವಿಸುವುದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವುದಕ್ಕೆ ಕುತೂಹಲದಿಂದ ಅಪೇಕ್ಷಿಸಿದ್ದೇನೆ. ನಾನು ನಿಮಗೆ ಹೇಳುತ್ತೇನೆ, ಇದು ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವುದೇ ಇಲ್ಲ ಎಂದು ಹೇಳಿದನು.

ಆಮೇಲೆ ಆತನು ಪಾತ್ರೆಯನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ – ಇದನ್ನು ತಕ್ಕೊಂಡು ನಿಮ್ಮಲ್ಲಿ ಹಂಚಿಕೊಳ್ಳಿರಿ. ಇಂದಿನಿಂದ ದೇವರ ರಾಜ್ಯವು ಬರುವ ತನಕ ನಾನು ದ್ರಾಕ್ಷಾರಸವನ್ನು ಕೊಡಿಯುವುದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು. ಬಳಿಕ ಆತನು ರೊಟ್ಟಿ – ಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಮುರಿದು ಅವರಿಗೆ ಕೊಟ್ಟು, – ಇದು ನಿಮಗೋಸ್ಕರ ಕೊಟ್ಟಿರು – ವ ನನ್ನ ದೇಹ; ನನ್ನನ್ನು ನೆನೆಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರಯನ್ನು ತೆಗೆದುಕೊಂಡು – ಇದು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ.

ಈ ವಾಕ್ಯಭಾಗದ ಕಥೆಯನ್ನು ಓದಿದ ನಂತರ, ಈ ವಿಧಾನಗಳಲ್ಲಿ ಪರಿಶೀಲಿಸಿ:

- ನೆನಪಿನಿಂದ ಕಥೆಯನ್ನು ಹೇಳಿರಿ.
- ಕಥೆಯ ಬಗ್ಗೆ ಮಾತನಾಡಿರಿ. ಏನಾಯಿತು?
- ಕಥೆಯನ್ನು ಮತ್ತೆ ಹೇಳಿ ಅಥವಾ ಓದಿ.
- ಕಥೆಯನ್ನು ವಿವರಿಸುವ ನಾಟಕವನ್ನು ಮಾಡಿ.
- ಕಥೆಯನ್ನು ವಿವರಿಸುವ ಚಿತ್ರಗಳನ್ನು ಬರೆಯಿರಿ.

ಕಥೆಯನ್ನು ಪರಿಶೀಲಿಸಿದ ನಂತರ, ಕಥೆಯನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

- ದೇವರ ಬಗ್ಗೆ ನಾವು ಏನ್ನು ಕಲಿತೆವು?
- ಮನುಷ್ಯರ ಬಗ್ಗೆ ನಾವು ಏನನ್ನು ಕಲಿತೆವು?
- ನಾವು ಏನು ಮಾಡಬಾರದು?
- ನಾವು ಏನು ಮಾಡಬೇಕು?

ಈ ಸಾಮಾನ್ಯ ಪ್ರಶ್ನೆಗಳನ್ನು ಚರ್ಚಿಸಿದ ನಂತರ, ಈ ನಿರ್ದಿಷ್ಟ ಕಥೆಗೆ ಕೆಳಗಿನವುಗಳು ಸಹಾಯಕವಾಗಬಹುದು.

ಕೆಳಗಿನವುಗಳನ್ನು ಚರ್ಚಿಸಿ:

- ಕರ್ತನ ಭೋಜನ ಎಂದರೇನು?
  1 ಕೊರಿಂಥ 11:23–26 ಈ ವಾಕ್ಯಗಳನ್ನು ಓದಿರಿ, ಕರ್ತನಭೋಜನವೆನ್ನುವುದು ಯೇಸುವನ್ನು ನೆನಪಿಟ್ಟುಕೊಳ್ಳುವುದು, ಆತನ ಮರಣವನ್ನು ಸಂಕೇತಿಸುವುದು ಮತ್ತು ಆತನು ಬರುವ ತನಕ ಆತನ ಮರಣವನ್ನು ಪ್ರಚುರಪಡಿಸುವುದು ನಂಬುವವರ ಪುನರಾವರ್ತಿತ ಕ್ರಿಯೆಯಾಗಿದೆ.

- ಕರ್ತನ ಭೋಜನವನ್ನು ನಾವು ಏಕೆ ಸ್ವೀಕರಿಸಬೇಕು?
  ಬಯಸಿದ್ದಲ್ಲಿ 1 ಕೊರಿಂಥ 11:23–26 ಈ ವಾಕ್ಯಗಳನ್ನು ಓದಿರಿ. ಯೇಸುವಿನ ದೇಹವು ಮುರಿಯಲ್ಪಟ್ಟಿತು ಮತ್ತು ಆತನನ್ನು ನಂಬುವ ಎಲ್ಲರಿಗೂ ಆತನ ರಕ್ತವನ್ನು ಹಂಚಲಾಯಿತು.

- ಕರ್ತನ ಭೋಜನವನ್ನು ನಾವು ಹೇಗೆ ಸ್ವೀಕರಿಸಬೇಕು?
  1 ಕೊರಿಂಥ 11:27–30 ಈ ವಾಕ್ಯಗಳನ್ನು ಓದಿರಿ. ವಿಶ್ವಾಸಿಗಳು ರೊಟ್ಟಿಯನ್ನು ತಿನ್ನಲು, ದ್ರಾಕ್ಷಾರಸವನ್ನು ಕುಡಿಯಲು ಒಟ್ಟಾಗಿ ಸೇರುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯು ತಮ್ಮನ್ನು ತಾವು ಪರೀಕ್ಷಿಸಿಕೊಂಡು, ತಮ್ಮ ಪಾಪಗಳನ್ನು ದೇವರ ಮುಂದೆ ಒಪ್ಪಿಕೊಳ್ಳಬೇಕು ಮತ್ತು ಯೇಸು ತಾನು ನಮ್ಮ ಪಾಪಗಳನ್ನು ಕ್ಷಮಿಸಲು ಸತ್ತಿರುತ್ತಾನೆಂದು ನೆನಪಿನಲ್ಲಿಟ್ಟುಕೊಳ್ಳಬೇಕು.

- ಕರ್ತನ ಭೋಜನವನ್ನು ನಾವು ಯಾರಾರು ಸ್ವೀಕರಿಸಬೇಕು?
  1 ಕೊರಿಂಥ 11:17–34 ಈ ವಾಕ್ಯಗಳನ್ನು ಓದಿರಿ. ಯೇಸುವಿನ ಬದ್ಧತೆಯುಳ್ಳ ಅನುಯಾಯಿಗಳು ಕರ್ತನ ಭೋಜನವನ್ನು ಯೋಗ್ಯ ರೀತಿಯಲ್ಲಿ ಸ್ವೀಕರಿಸಬೇಕು.

# ಅಭ್ಯಾಸ ಮಾಡಿ

ಕರ್ತನ ಬೋಜನವನ್ನು ಸ್ವೀಕರಿಸಬೇಕೆಂದು ಕಲಿಸಿ.
ಕರ್ತನ ಬೋಜನವನ್ನು ಒಟ್ಟಿಗೆ ಅನುಸರಿಸಿ.

## ಭಾಗ ಮೂರು
## ಮುಂದಾಗಿ ನೋಡುವುದು

# ಬದ್ಧತೆ

ಯೇಸುವಿನ ಕಥೆ ಮತ್ತು ಆಜ್ಞೆಯಿಂದ ಏನು ಪಾಲಿಸಬೇಕೆಂದು ಚರ್ಚಿಸಿ. ಮುಂದಿನ ಭೇಟಿಯ ಮೊದಲು ಪಾಲಿಸಬೇಕಾದ ಕೆಲವು ಮಾರ್ಗಗಳು ಕೆಳಕಂಡಂತಿರುತ್ತದೆ:

- ನಿಮ್ಮ ನೆರೆಹೊರೆಯವರಿಗೆ ಸಹಾಯ ಮಾಡುವ ಮೂಲಕ ಉದ್ದೇಶಪೂರ್ವಕವಾಗಿ ಪ್ರೀತಿಯನ್ನು ತೋರಿಸಲು ಸಮಯ ತೆಗೆದುಕೊಳ್ಳಿ.
- ಲೂಕ 22:7–20 ಈ ವಾಕ್ಯದಲ್ಲಿರುವ ಕಥೆಯನ್ನು ಹೇಳಿರಿ, ನಿಮ್ಮ ಕಥೆಯನ್ನೂ ದೇವರ ಕಥೆಯನ್ನೂ ಹೇಳಿರಿ.
- ಉದ್ದೇಶಪೂರ್ವಕವಾಗಿ ಇತರರನ್ನು ಪ್ರೀತಿಸಿರಿ.
- ಪ್ರತಿದಿನ ಪ್ರಾರ್ಥನೆ ಮಾಡಿರಿ ಮತ್ತು ಸತ್ಯವೇದವನ್ನೂ ಓದಿರಿ.

## ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಸಮಯವನ್ನು ಒಟ್ಟಿಗೆ ಅಂತ್ಯಮಾಡಿರಿ. ಎಲ್ಲರೂ ಮಾಡಿದ ಬದ್ಧತೆಗಳಿಗಾಗಿ ಪ್ರಾರ್ಥಿಸಿ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.